ವಿಸ್ತರಣೆಗೊಂಡಿತ್ತು. ರತ್ನಗಂಬಳಿಯ ಬಣ್ಣಗಾರಿಕೆ ಮತ್ತು ಚಿತ್ರವಿನ್ಯಾಸಗಳನ್ನು, ಮಸೀದಿಗಳ ಮೀನಾರ, ದರ್ಗಾದ ಗುಂಬಜ್, ಕೋಟೆಯ ಕಮಾನು, ಪಿಂಗಾಣಿಯ ಪಾತ್ರೆ, ತಾಮ್ರದ ಹೂಜಿ, ಮಹಿಳೆಯರ ಸೊಂಟಪಟ್ಟಿಗಳೂ ಹಂಚಿಕೊಂಡಿದ್ದವು. ಕುರಾನಿನ ಪವಿತ್ರ ಮಂತ್ರಗಳನ್ನು ಅರಬ್ಬಿ ಅಕ್ಷರಗಳನ್ನು ಬಿಡಿಸುವ ವಿಷಯದಲ್ಲಿ ಕೋಟೆಗೋಡೆ, ದರ್ಗಾದ ಗುಂಬಜಿನ ಒಳಮಾಡು, ಮಸೀದಿಯ ಮಿನಾರು, ರತ್ನಗಂಬಳಿಗಳು ಸಮಾನ ಭಿತ್ತಿಯಾಗಿ ಮೈಯೊಡ್ಡಿದ್ದವು. ರತ್ನಗಂಬಳಿಯ ನೇಕಾರರಿಗೂ, ಕಟ್ಟಡದ ಕೆಲಸಗಾರರಿಗೂ ಲೋಹಕಾರರಿಗೂ ಬಡಗಿಗಳಿಗೂ ಶಿಲ್ಪಕಾರರಿಗೂ ಹಿನ್ನೆಲೆಯಾಗಿ ಸಮಾನವಾದ ಸೌಂದರ್ಯ ಮೀಮಾಂಸೆ ಕೆಲಸ ಮಾಡಿತ್ತು. ಮಧ್ಯ ಏಶಿಯಾದ ಸಂಸ್ಕೃತಿ ನಾಗರಿಕತೆಗಳ ಛಾಯಾಚಿತ್ರಗಳಂತೆ ರತ್ನಗಂಬಳಿಗಳು ಭಾಸವಾದವು. ಅಝುರಬೈಜಾನ್, ಇರಾಕ್, ಇರಾನಿನ ರತ್ನಗಂಬಳಿಗಳು ತಮ್ಮ ದೇಶಗಳ ಚರಿತ್ರೆಗೂ ವರ್ತಮಾನಕ್ಕೂ ಸೇತುವೆಯಂತೆ ತೋರಿದವು.

ಯಾವುದೇ ನಾಡಿನ ಕರಕುಶಲ ಕಲೆಗಳು ಅದರ ಸಾಮುದಾಯಿಕ ಸೌಂದರ್ಯಪ್ರಜ್ಞೆಯ ಪ್ರತೀಕಗಳು; ಅಲ್ಲಿನ ಆರ್ಥಿಕತೆಯ ಕನ್ನಡಿಗಳು; ಒಂದು ದೇಶದ ಚರಿತ್ರೆ ಮತ್ತು ವರ್ತಮಾನವನ್ನು ಅದರ ರಾಜಕೀಯ ವಿದ್ಯಮಾನಗಳ ಮೂಲಕ ನೋಡುವ ನಮ್ಮ ಸುದ್ದಿಗಾರಿಕೆ ಮತ್ತು ಚರಿತ್ರೆಯ



ಮರುಭೂಮಿಯ ನಾಡುಗಳ ರತ್ನಗಂಬಳಿಗಳಲ್ಲಿ ಸಮೃದ್ಧವಾಗಿದ್ದ ಹೂವು ಹಣ್ಣು, ಹಕ್ಕಿ, ಚಿಟ್ಟೆ, ಮರಗಿಡಗಳು

ಬರವಣಿಗೆಗಳ ಕ್ರಮವು ಜನಪ್ರಿಯವಾಗಿದೆ. ಈ ಚರಿತ್ರೆ ಮತ್ತು ವರ್ತಮಾನಗಳನ್ನು ಅಲ್ಲಿನ ಕಲೆಗಳ ಮೂಲಕ ನೋಡಿದರೆ, ದೇಶಗಳು ಬೇರೆಯೇ ಆಗಿ ಗೋಚರಿಸುತ್ತವೆ. ಯಾಕೆಂದರೆ, ಕುಶಲಕಲೆಗಳು ಪ್ರಭುತ್ವದ ಅಧಿಕಾರ, ಧರ್ಮಗಳ ಶ್ರದ್ಧೆ, ವ್ಯಾಪಾರದ ತಿರುಗಾಟ, ಸಂತರ ಅಧ್ಯಾತ್ಮ, ಪಶುಪಾಲನೆಯ ಕಷ್ಟ, ಸಮುದಾಯಗಳ ಲೋಕದೃಷ್ಟಿ ಮತ್ತು ಸೃಜನಶೀಲತೆಗಳನ್ನು ಏಕೀಭವಿಸಿರುತ್ತವೆ.

ರಾಜರಾಳಿಕೆಯಿದ್ದಾಗ ರತ್ನಗಂಬಳಿಗಳಿಗೆ ರಾಜರು, ಸಿರಿವಂತರು, ವ್ಯಾಪಾರಿಗಳು ಪ್ರಮುಖ ಗ್ರಾಹಕರಾಗಿದ್ದರು. ಈಗ ಅವನ್ನು ಕೊಳ್ಳುತ್ತಿರುವ ಸುಕುಮಾರಸ್ವಾಮಿಗಳೇ ಬೇರೆ. ನಾನು–ಬಾನು ಅಮೆರಿಕೆಯಲ್ಲಿದ್ದ ಕಾಲದಲ್ಲಿ, ಯೂರೋಪಿನ ದೇಶಗಳಲ್ಲಿ ತಿರುಗಾಡುವಾಗ, ಮಧ್ಯ ಏಷಿಯಾದ ರತ್ನಗಂಬಳಿ ಮಾರುವ ಬೃಹತ್ ಮಳಿಗೆಗಳನ್ನು ನೋಡಿದೆವು. ಸಿಲ್ಕ್‌ರೂಟಿನ ಸರಕುಗಳು ಸಾಗಣೆಯಾಗುವ ಪಥ ಮಾತ್ರವಲ್ಲ, ಗ್ರಾಹಕರೂ ಬದಲಾಗಿದ್ದರು. ನಮಗೆ ಈ ರತ್ನಗಂಬಳಿಗಳನ್ನು ನೇಯುವ ಜಾಗಗಳಿಗೆ ಹೋಗಲು ಸಾಧ್ಯವಾಗಲಿಲ್ಲ. ಹೋಗಲು ಸಾಧ್ಯವಾಗಿದ್ದರೆ, ಕಂಬಳಿಕಾರರ ಕಷ್ಟಸುಖಗಳನ್ನು ಕೇಳಬಹುದಿತ್ತು. ಲಂಬವಾಗಿ ಇಳಿಬಿದ್ದ ರೇಷ್ಮೆ ಮತ್ತು ಉಣ್ಣೆಯ ನೂಲುಗಳ ಹಾಸಿನೊಳಗೆ ಬೆರಳು ಹೊಗಿಸಿ, ಬಣ್ಣಬಣ್ಣದ ನೂಲುಗಳನ್ನು ಪೋಣಿಸಿ ಗಂಟುಹಾಕಿ ಚಕ್ಕನೆ ಕತ್ತರಿಸುವ, ಅವರ ಕಸುಬುದಾರಿಕೆ ನೋಡಸಿಗುತ್ತಿತ್ತು. ಕಣ್ಣಮುಂದೆ ಅಂಕಿಸಂಖ್ಯೆಗಳ ಮತ್ತು ವಿನ್ಯಾಸಗಳ ನಕ್ಷೆಯನ್ನು ಇಟ್ಟುಕೊಂಡು, ನೂಲಿನೊಳಗೆ ಆಕೃತಿಗಳನ್ನು ಬಿಡಿಸುವ ಅವರ ಚಾಕಚಾಕ್ಯತೆಯ ದರ್ಶನ ಸಿಗುತ್ತಿತ್ತು. ಅವರು ವರ್ಷಗಟ್ಟಲೆ ಒಂದೊಂದು ಕಂಬಳಿ ನೇಯುವಾಗ, ಅದು ದುಡಿಮೆ ಮಾತ್ರವಲ್ಲ, ಧ್ಯಾನಸ್ಥವಾದ ಅವಸ್ಥೆಯಲ್ಲಿ ಸಾಧಿಸಿರುವ ಅಧ್ಯಾತ್ಮ ಎಂಬುದು ತಿಳಿಯುತ್ತಿತ್ತು. ಕಬೀರ್, ಮನ್ಸೂರ್ ಹಲ್ಲಾಜ್, ಮೊದಲಾಗಿ ಜಗತ್ತಿನ ಬಹುತೇಕ ಸಂತರು ನೇಕಾರ ಮೂಲದಿಂದ ಬಂದವರು ಎಂಬುದು ಆಕಸ್ಮಿಕವಲ್ಲ.

ಪ್ರತಿಕ್ರಿಯಿಸಿ: feedback@sudha.co.in







ನಮ್ಮ ಹೋಮಿಯೋಪತಿ
"ಆರೋಗ್ಯ ಸಂಜೀವಿನಿ"

For Consultation
9620 240 240
www.nammahomeopathy.com

" ನಮ್ಮ ಹೋಮಿಯೋಪತಿ " ಸಂಸ್ಥೆಯ ಲಾಂಛನವನ್ನು ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರು ಬಿಡುಗಡೆ ಮಾಡಿ ಶುಭ ಕೋರಿದರು. ಸಂಸ್ಥೆಯ ಹಿರಿಯ ವೈದ್ಯರಾದ ಡಾ.ಆಶಾರಾಣಿ ಮತ್ತು ಡಾ.ಸ್ನೇಹಾ ಉಪಸ್ಥಿತರಿದ್ದರು.

30% OFF On Treatment Courses. *T&C Apply

**ನಮ್ಮ ಆಧುನಿಕ ಹೋಮಿಯೋಪತಿ ಚಿಕಿತ್ಸೆಗಳು :**

ಸಂಧಿವಾತ । ಮಧುಮೇಹ । ಅಲರ್ಜಿ । ಅಸ್ತಮಾ । ಥೈರಾಯ್ಡ್ । ಪಿ.ಸಿ.ಓ.ಡಿ । ಬಂಜೆತನ । ವೆರಿಕೋಸ್ ವೇನ್ಸ್
ಸೋರಿಯಾಸಿಸ್ । ಬಿಳಿ ಮಚ್ಚೆ । ಬೆನ್ನು ನೋವು । ಪೈಲ್ಸ್ । ಲೈಂಗಿಕ ಸಮಸ್ಯೆಗಳು